ಫ್ರೀಡಂ ನ್ಯೂಸ್

# ಡಿಕೆಶಿ ಇದ್ದ ಕಾರ್ಯಕ್ರಮದಲ್ಲಿ ಅಗ್ನಿ ಅವಘಡ

## ಸಿಂಧನೂರು ಸಾಮೂಹಿಕ ವಿವಾಹದಲ್ಲಿ ಗೊಂದಲ

**ರಾಯಚೂರು:** ಜಿಲ್ಲೆಯ ಸಿಂಧನೂರು ಪಟ್ಟಣದಲ್ಲಿ ಇಂದು ಆಯೋಜಿಸಲಾಗಿದ್ದ 151 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮವು ಹಲವು ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಕಾರ್ಯಕ್ರಮದಲ್ಲಿ ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ಪಾಲ್ಗೊಂಡು ನವದಂಪತಿಗಳಿಗೆ ಶುಭ ಹಾರೈಸಿದರು. ಗಣ್ಯರ ಆಗಮನದ ವೇಳೆ ಉಂಟಾದ ಹೆಲಿಪ್ಯಾಡ್ ಗೊಂದಲ ಹಾಗೂ ವೇದಿಕೆಯ ಮೇಲೆ ಸಂಭವಿಸಿದ ಅಗ್ನಿ ಅವಘಡ ಕಾರ್ಯಕ್ರಮದಲ್ಲಿದ್ದವರಲ್ಲಿ ಆತಂಕ ಮೂಡಿಸಿತ್ತು.

ಸಮಾರಂಭದ ಆರಂಭದಲ್ಲೇ ನಟ ಸುದೀಪ್ ಅವರ ಹೆಲಿಕಾಪ್ಟರ್ ಲ್ಯಾಂಡಿಂಗ್ ವೇಳೆ ಭದ್ರತಾ ಗೊಂದಲ ಉಂಟಾಯಿತು. ನಗರದ ಸರ್ಕಾರಿ ಕಾಲೇಜು ಮೈದಾನದಲ್ಲಿ ಗಣ್ಯರಿಗಾಗಿ ಮೂರು ಪ್ರತ್ಯೇಕ ಹೆಲಿಪ್ಯಾಡ್‌ಗಳನ್ನು ಸಿದ್ಧಪಡಿಸಲಾಗಿತ್ತು. ಆದರೆ, ಮೊದಲು ಆಗಮಿಸಿದ ಸುದೀಪ್ ಅವರ ಹೆಲಿಕಾಪ್ಟರ್, ತಮಗೆ ನಿಗದಿಯಾಗಿದ್ದ ಸ್ಥಳ ಬಿಟ್ಟು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗಾಗಿ ಮೀಸಲಾಗಿದ್ದ ಹೆಲಿಪ್ಯಾಡ್‌ನಲ್ಲಿ ಇಳಿಯಿತು. ಇದನ್ನು ಗಮನಿಸಿದ ಪೊಲೀಸ್ ಅಧಿಕಾರಿಗಳು ಕೂಡಲೇ ಪೈಲಟ್‌ಗೆ ಎಚ್ಚರಿಕೆ ನೀಡಿ, ಹೆಲಿಕಾಪ್ಟರ್ ಅನ್ನು ಮತ್ತೆ ಮೇಲೆ ಹಾರಿಸಿ ತಮಗೆ ನಿಗದಿಪಡಿಸಿದ್ದ ಎರಡನೇ ಹೆಲಿಪ್ಯಾಡ್‌ನಲ್ಲಿ ರೀ-ಲ್ಯಾಂಡಿಂಗ್ ಮಾಡಿಸುವ ಮೂಲಕ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ಸಂಜೆಯ ವೇಳೆಗೆ ವೇದಿಕೆಯ ಮೇಲೆಯೂ ಬೆಂಕಿಯ ಭೀತಿ ಎದುರಾಯಿತು. ನವಜೋಡಿಗಳಿಗೆ ಹರಸಿ ಸಚಿವರು ವೇದಿಕೆಯಿಂದ ಇಳಿಯುತ್ತಿದ್ದ ಸಂದರ್ಭದಲ್ಲಿ, ಮೆಟ್ಟಿಲುಗಳ ಬಳಿ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ದಿಢೀರ್ ಬೆಂಕಿ ಕಾಣಿಸಿಕೊಂಡಿತು. ಬೃಹತ್ ವೇದಿಕೆಯ ಮೇಲೆ ಸಚಿವರು ಹಾಗೂ ಗಣ್ಯರು ಇರುವಾಗಲೇ ಬೆಂಕಿ ಕಾಣಿಸಿಕೊಂಡಿದ್ದರಿಂದ ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ತಕ್ಷಣವೇ ಅಲರ್ಟ್ ಆಗಿ ಡಿ.ಕೆ. ಶಿವಕುಮಾರ್ ಹಾಗೂ ಈಶ್ವರ ಖಂಡ್ರೆ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು. ತಾಂತ್ರಿಕ ದೋಷದಿಂದ ಉಂಟಾದ ಈ ಸಣ್ಣ ಅಗ್ನಿ ಅವಘಡವನ್ನು ಕೂಡಲೇ ನಂದಿಸಲಾಯಿತು.

ಈ ಎಲ್ಲಾ ಸವಾಲುಗಳ ನಡುವೆಯೂ 151 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಕಾರ್ಯಕ್ರಮದ ಸಂಘಟಕರು ಹಾಗೂ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಘಟನೆಯಿಂದ ಕೆಲಕಾಲ ಆತಂಕಕ್ಕೊಳಗಾದರೂ, ಯಾವುದೇ ಪ್ರಾಣಾಪಾಯ ಅಥವಾ ದೊಡ್ಡ ಮಟ್ಟದ ಹಾನಿ ಸಂಭವಿಸದ ಕಾರಣ ಎಲ್ಲರೂ ನಿಟ್ಟುಸಿರು ಬಿಟ್ಟರು. ಸದ್ಯ ಜಿಲ್ಲಾಡಳಿತವು ಹೆಲಿಪ್ಯಾಡ್ ಲೋಪ ಹಾಗೂ ಶಾರ್ಟ್ ಸರ್ಕ್ಯೂಟ್ ವಿಚಾರವಾಗಿ ತನಿಖೆಗೆ ಸೂಚನೆ ನೀಡಿದೆ.






# ಗಣಿಗ ರವಿಯ ಬೆಂಕಿಯೂ...ಕೆ.ಆರ್. ಪೇಟೆ ಶಾಸಕರ ಭ್ರೂಣ ಹತ್ಯೆಯೂ..!

## EDITORIAL





ನಮ್ಮ ಎಂಎಲ್‌ಎಗಳು ಅಸಲಿಗೆ ಏನೆಲ್ಲಾ ಮಾಡುತ್ತಿದ್ದಾರೆ? ಈ ಪ್ರಶ್ನೆಗೆ ನಮ್ಮಂಥ ರಾಜಧಾನಿ ಕೇಂದ್ರಿತ ಪತ್ರಕರ್ತರಿಗೆ ಗೊತ್ತಿರುವುದಿಲ್ಲ. ಏಕೆಂದರೆ ಆ ಎಂಎಲ್‌ಎಗೆ ಎಷ್ಟು ಗ್ರಾಂಟ್ ಬಂದಿದೆ, ಅದರಲ್ಲಿ ಆತನ ಪರ್ಸೆಂಟೇಜ್ ಎಷ್ಟು ಎಂದಷ್ಟೇ ಅಂದಾಜಿಸಿ ಸುಮ್ಮನಾಗುತ್ತೇವೆ. ಉಳಿದಂತೆ ಅವನ ಕ್ಷೇತ್ರದಲ್ಲಿ ಬೇರೆ ಬೇರೆ ಇಲಾಖೆಯ ಎಷ್ಟು ಪ್ರಾಜೆಕ್ಟ್‌ಗಳು ಬಂದಿವೆ, ಅದರಲ್ಲಿ ಕಮಾಯಿಸಿದ ಪರ್ಸೆಂಟೇಜ್ ಎಷ್ಟು? ಕ್ಷೇತ್ರದಲ್ಲಿ ಆತ ಮಾಡಿಸಿದ ವರ್ಗಾವಣೆ ದುಡಿಮೆ ಎಷ್ಟು? ಹಳೆಯ ಹಗರಣ ಕೆದಕಿ ಕಟಾಯಿಸಿದ್ದೆಷ್ಟು? ಬೇರೆ ಇಲಾಖೆಗಳ ಫೈಲ್ ಹಿಡಿದು ಮಾಡಿದ ಬ್ರೋಕರೇಜ್ ಎಷ್ಟು? ಮಾಡುತ್ತಿರುವ ಕಾರ್ಯಕ್ರಮಗಳೆಷ್ಟು? ಆತನ ಬಳಿ ಎಷ್ಟು ಜನ ಕರ ಸಂಗ್ರಾಹಕರಿದ್ದಾರೆ? ಮಂತ್ಲಿ ದುಡಿಮೆ ಎಷ್ಟಿರಬಹುದು, ಖರ್ಚು ಎಷ್ಟು? ಆತ ಆಡಳಿತ ಯಂತ್ರ ಬಳಸಿ ಎದುರಾಳಿಗಳನ್ನು ಹೇಗೆ ಮಟ್ಟಹಾಕುತ್ತಾನೆ? ಮುಂದೆಯೂ ಮತ್ತೆ ಗೆಲ್ಲಲು ಏನೇನು ಮಾಡುತ್ತಿದ್ದಾನೆ ಎಂಬುದೆಲ್ಲದರ ಅಂದಾಜು ನಮಗೆ ಇರುವುದಿಲ್ಲ..

ಈಗ ಇಬ್ಬರು ಎಂಎಲ್‌ಎಗಳ ಇಂದಿನ ಹೇಳಿಕೆ ಬಗ್ಗೆ ಚರ್ಚೆ ಮಾಡೋಣ. ಮಂಡ್ಯ ಕಾಂಗ್ರೆಸ್ ಎಂಎಲ್‌ಎ ಶ್ರೀಯುತ ಗಣಿಗ ರವಿ ಕುಮಾರ್ ಅವರ ಬಾಯಲ್ಲಿ ಬೆಂಕಿ ಉಗುಳಿ ಸದ್ದು ಮಾಡಿದ್ದಾರೆ. “ಮಂಡ್ಯ ವಿವಿ ಮುಚ್ಚಲು ಮುಂದಾದರೆ ಬೆಂಕಿ ಹಚ್ಚಿಸುತ್ತೇನೆ. ರಸ್ತೆಯಲ್ಲಿ ಓಡಾಡೋಕೆ ಬಿಡಲ್ಲ” ಎಂದಿದ್ದಾರೆ. “ಮಂಡ್ಯ ಯೂನಿವರ್ಸಿಟಿ ಕ್ಯಾನ್ಸಲ್ ಆದರೆ ಮೈಸೂರಿನ ಗುಲಾಮರಾಗ್ತೇವೆ” ಎಂದು ಅಬ್ಬರಿಸಿದ್ದಾರೆ. ಕ್ರಿಮಿನಲ್ ಕೇಸ್‌ಗೆ ಅರ್ಹವಾದ ಮಾತುಗಳು, ಎಂಎಲ್‌ಎ ಬಾಯಲ್ಲಿ ಸಹಜ ನುಡಿಗಳಾಗಿ ಹೊಮ್ಮಿರುವುದು ನಮ್ಮ ರಾಜಕಾರಣಿಗಳ ಸಂದಾಯದ ಮನಸ್ಥಿತಿಗೆ ಕನ್ನಡಿ ಹಿಡಿದಿವೆ. ಜೊತೆಗೆ ಮಂಡ್ಯದಲ್ಲಿ ವಿವಿ ಹೋದರೆ ಮೈಸೂರಿನ ಗುಲಾಮರಾಗ್ತೇವೆ ಎನ್ನುವ ಮಾತು, ಇವರ ಶ್ರೇಷ್ಠ ದರ್ಜೆಯ ಚಿಂತನೆಯನ್ನು ಜಾಹೀರು ಮಾಡಿದೆ. ಇಂಥ ಮಹೋನ್ನತ ಚಿಂತನೆಯುಳ್ಳ ಜನ ಪ್ರತಿನಿಧಿಯನ್ನು ಪಡೆದ ಮಂಡ್ಯದ ಜನರು ಧನ್ಯರು...

ಇನ್ನು ಕೆ.ಆರ್. ಪೇಟೆ ಎಂಎಲ್‌ಎ ಎಚ್‌ಟಿ ಮಂಜು ಎನ್ನುವ ಮಹನೀಯರು, ಭ್ರೂಣ ಹತ್ಯೆಗೆ ಸಹಕರಿಸಿದ ವೈದ್ಯರನ್ನು ಜೈಲಿಗಟ್ಟಿದ್ದು ಸರಿಯಲ್ಲ ಎಂದು ವಾದಿಸಿದ್ದಾರೆ. ಸಣ್ಣ ನಿರ್ಲಕ್ಷ್ಯಕ್ಕೆ ವೈದ್ಯರನ್ನು ಅರೆಸ್ಟ್ ಮಾಡಬಾರದಿತ್ತು ಎಂದು ಅವರು ಪ್ರಶ್ನೆ ಮಾಡಿದ್ದಾರೆ. ಲೋಕಾಯುಕ್ತ ವರದಿ ಬಳಿಕ ವೈದ್ಯಕೀಯ ವೃತ್ತಿಗೆ ದ್ರೋಹ ಬಗೆದ ವೈದ್ಯರನ್ನು ದಸ್ತಗಿರಿ ಮಾಡಿದ್ದು ತಪ್ಪು ಎನ್ನುವ ಮೂಲಕ ಗೌರವಾನ್ವಿತ ಮಂಜು ಅವರಿಗೆ ಭ್ರೂಣಹತ್ಯೆ ಎಂಬುದು ಅಪರಾಧವೂ ಅಲ್ಲ, ಪಾಪವೂ ಅಲ್ಲ...!. ಭ್ರೂಣ ಹತ್ಯೆ ರಾಜ್ಯದಲ್ಲಿ ತೀವ್ರವಾಗಿದೆ. ಪರಿಣಾಮ ಬಹುತೇಕ ಸಮುದಾಯಗಳಲ್ಲಿ ಮದುವೆಗೆ ವಧು ಸಿಗುತ್ತಿಲ್ಲ. ಪರಿಣಾಮ ವಧು ದಕ್ಷಿಣೆ ಕೊಟ್ಟರೂ ಹೆಣ್ಣು ಸಿಗದೆ ಸಮಾಜದ ನೆಮ್ಮದಿ ಹಾಳಾಗಿದೆ. ಲಿಂಗಾನುಪಾತ ಕುಸಿತದಲ್ಲಿ ಮಂಡ್ಯ ಜಿಲ್ಲೆ ಇಡೀ ರಾಜ್ಯದಲ್ಲೇ ಕಳಪೆಯಾಗಿದೆ. ಲಿಂಗ ಅಸಮಾನತೆ ತಡೆಗೆ ಸರ್ಕಾರ ಕಟ್ಟುನಿಟ್ಟಿನ ಕಾಯಿದೆ ತಂದಿದೆ. ಆದರೂ ಐದು-ಹತ್ತು ಸಾವಿರದ ಆಸೆಗೆ ಬಿದ್ದು ವೈದ್ಯರು ಭ್ರೂಣ ಹತ್ಯೆಗೆ ಕುಮ್ಮಕ್ಕು ಕೊಡುತ್ತಿದ್ದಾರೆ. ಇವರಿಗೆ ಇಂಥ ಶಾಸಕರ ಪರೋಕ್ಷ ಬೆಂಬಲ ಇರುವುದು ದುರಂತವೇ ಸರಿ.

ನಮ್ಮ ನಾಯಕರು ಲಿಟಿಗೇಷನ್ ದಂಧೆ, ಮೀಡಿಯೇಷನ್ ಬಿಸಿನೆಸ್, ಫಾರಿನ್ ಸರ್ವಿಸ್‌ನಲ್ಲಿ ಮುಳುಗಿರುತ್ತಾರೆ. ಆದಷ್ಟು ಬೇಗ ಸಾವಿರ ಕೋಟಿ ಕ್ಲಬ್ ಸೇರಲು ಸರ್ಕಸ್ ಮಾಡುತ್ತಿರುತ್ತಾರೆ. ಈ ಹಾದಿಯಲ್ಲಿ ಧರ್ಮ ಸೂಕ್ಷ್ಮದ ಬಲು ದುಂಡಾವರ್ತಿ, ಜನ ಸೇವೆ ಬದಲು ಧನ ದಾಹ, ಕಾನೂನು ಬದಲು ವೈಯಕ್ತಿಕ ಪುಢಾರಿಗಿರಿ ವಿಜೃಂಭಿಸುತ್ತಿದೆ. ಇಂಥಹವರನ್ನು ಗುರುತಿಸಿ ಎಲ್ಲ ಪಕ್ಷಗಳ ಹೈಕಮಾಂಡ್‌ಗಳು ಟಿಕೆಟ್ ಕೊಡಬಾರದು. ಜನರೂ ಬೆಂಬಲಿಸಬಾರದು. ರಾಜಕಾರಣಿಗಳು ಪ್ರೌಢತೆ ಬೆಳೆಸಿಕೊಳ್ಳಬೇಕು. ಜನ ಕೊಟ್ಟ ಅಧಿಕಾರವನ್ನು ವಿನಯದಿಂದ ಅನುಭವಿಸಬೇಕು. ಅಧಿಕಾರ ನೆತ್ತಿಗೇರಿ ತಲೆ ನಿಲ್ಲದಂತಾಡಿದರೆ, ಜನಾರ್ದನ ರೆಡ್ಡಿ, ವಿನಯ್ ಕುಲಕರ್ಣಿ, ಪ್ರಜ್ವಲ್ ರೇವಣ್ಣ, ಪಪ್ಪಿಗಳಾಗಬೇಕಾದೀತು.

For journalists centered in the capital, the true daily operations of an MLA often remain a mystery. We tend to skim the surface, calculating the grants allocated to a constituency and making cynical guesses about commission percentages. However, the reality is far more complex. The public rarely sees the intricate web of earnings derived from diverse departmental projects, the lucrative business of official transfers, or the strategic dredging of old scandals for financial settlements. From brokering departmental files to managing a dedicated network of tax collectors, the modern MLA operates a sophisticated financial and political machine designed to build a thousand-crore empire while systematically crushing any local opposition.

This administrative greed often manifests as dangerous public posturing, as seen in the recent statements by Mandya Congress MLA Ganiga Ravi Kumar. While discussing the future of Mandya University, the legislator resorted to inflammatory language that borders on criminal incitement. By threatening to set fires and claiming that the loss of the university would make citizens "slaves to Mysore," he has traded statesman-like dialogue for pure aggression. Such rhetoric not only exposes a regressive mindset but also highlights a disturbing trend where elected representatives feel entitled to incite chaos to protect their political interests.

Equally alarming is the stance taken by K.R. Pete MLA H.T. Manju regarding the recent crackdown on female foeticide. In a shocking defense, he argued against the arrest of doctors involved in these rackets, labeling their actions as "minor negligence." In a state—and specifically a district like Mandya—where the sex ratio is plummeting and gender inequality is destabilizing social structures, such comments are a tragedy. When a lawmaker views the grave crime of foeticide as a trivial matter, it provides a dangerous shield for those who exploit vulnerable families for a few thousand rupees, further eroding the moral fabric of society.

Today’s political landscape is increasingly dominated by litigation rackets, mediation businesses, and an insatiable hunger for wealth. The pursuit of public service has been replaced by a desperate race to join elite billionaire clubs. If political high commands continue to award tickets to those who prioritize personal thuggishness over the rule of law, the democratic system faces an existential threat. History serves as a stern warning: when power goes to the head and humility is abandoned, even the most powerful figures face an inevitable and public downfall. It is time for our leaders to cultivate maturity and remember that power is a loan from the people, not a permanent prize for personal gain.

# ಶೃಂಗೇರಿ ಮರುಎಣಿಕೆ ಹೈಡ್ರಾಮಾ

## ಫಲಿತಾಂಶ ಘೋಷಣೆಗೆ ಲೀಗಲ್ ನೋಟಿಸ್!



**ಬೆಂಗಳೂರು/ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣಾ ಫಲಿತಾಂಶ ಈಗ ತೀವ್ರ ಕುತೂಹಲ ಕೆರಳಿಸಿದ್ದು, ಹೈಕೋರ್ಟ್ ಆದೇಶದಂತೆ ನಡೆದ ಅಂಚೆ ಮತಗಳ ಮರುಎಣಿಕೆಯಲ್ಲಿ ಕಾಂಗ್ರೆಸ್‌ಗೆ ಆಘಾತ ಎದುರಾಗುವ ಸಾಧ್ಯತೆ ದಟ್ಟವಾಗಿದೆ. ನಿನ್ನೆ (ಮೇ 02) ನಡೆದ ಮರುಎಣಿಕೆಯಲ್ಲಿ ಬಿಜೆಪಿಯ ಡಿ.ಎನ್. ಜೀವರಾಜ್ ಮುನ್ನಡೆ ಸಾಧಿಸಿದ್ದಾರೆ ಎಂಬ ಸುದ್ದಿ ಹರಡುತ್ತಿದ್ದರೂ, ಚುನಾವಣಾಧಿಕಾರಿಗಳು ಈವರೆಗೂ ಅಧಿಕೃತ ಫಲಿತಾಂಶ ಪ್ರಕಟಿಸದಿರುವುದು ತೀವ್ರ ಗೊಂದಲಕ್ಕೆ ಕಾರಣವಾಗಿದೆ.**

ಬದಲಾದ ಮತಗಳ ಲೆಕ್ಕಾಚಾರ: 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕ ರಾಜೇಗೌಡ ಅವರು 201 ಮತಗಳ ಅಂತರದಿಂದ ಜಯಗಳಿಸಿದ್ದರು. ಆದರೆ, ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಜೀವರಾಜ್ ಕಾನೂನು ಹೋರಾಟ ನಡೆಸಿದ್ದರು. ಮೂಲಗಳ ಮಾಹಿತಿಯ ಪ್ರಕಾರ, ಮರುಎಣಿಕೆಯಲ್ಲಿ ರಾಜೇಗೌಡರು ಈ ಹಿಂದೆ ಪಡೆದಿದ್ದ 569 ಅಂಚೆ ಮತಗಳ ಪೈಕಿ ಬರೋಬ್ಬರಿ 255 ಮತಗಳು ಅಸಿಂಧುಗೊಂಡಿವೆ. ಇದರಿಂದ ಅವರ ಮತಗಳ ಸಂಖ್ಯೆ 314ಕ್ಕೆ ಕುಸಿದಿದ್ದು, 201 ಮತಗಳಿಂದ ಸೋತಿದ್ದ ಡಿ.ಎನ್. ಜೀವರಾಜ್ ಈಗ 52 ಮತಗಳ ಮುನ್ನಡೆ ಕಾಯ್ದುಕೊಂಡಿದ್ದಾರೆ ಎನ್ನಲಾಗುತ್ತಿದೆ.

ನ್ಯಾಯಾಂಗ ನಿಂದನೆ ಎಚ್ಚರಿಕೆ: ಮರುಎಣಿಕೆ ಪ್ರಕ್ರಿಯೆ ಮುಗಿದಿದ್ದರೂ ಫಲಿತಾಂಶ ಘೋಷಿಸಲು ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ಜೀವರಾಜ್ ಪರ ವಕೀಲೆ ಡಾ. ವಂದನಾ ಪಿ.ಎಲ್. ಅವರು ಚುನಾವಣಾಧಿಕಾರಿಗೆ ಲೀಗಲ್ ನೋಟಿಸ್ ಜಾರಿ ಮಾಡಿದ್ದಾರೆ. ಹೈಕೋರ್ಟ್ ಆದೇಶದಂತೆ ತಕ್ಷಣವೇ ಫಲಿತಾಂಶ ಪ್ರಕಟಿಸಬೇಕು, ಇಲ್ಲದಿದ್ದರೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವುದಾಗಿ ನೋಟಿಸ್‌ನಲ್ಲಿ ಎಚ್ಚರಿಸಲಾಗಿದೆ. ಅತ್ತ ಕಾಂಗ್ರೆಸ್ ಮತ್ತು ಇತ್ತ ಬಿಜೆಪಿ ಎರಡೂ ಪಕ್ಷಗಳ ಕಾರ್ಯಕರ್ತರು ತಾವೇ ಗೆದ್ದಿರುವುದಾಗಿ ಪ್ರತಿಪಾದಿಸುತ್ತಿರುವುದರಿಂದ ಕ್ಷೇತ್ರದಲ್ಲಿ ಹೈಡ್ರಾಮಾ ಮುಂದುವರಿದಿದೆ.

ಬೆಂಗಳೂರು/ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣಾ ಫಲಿತಾಂಶ ಈಗ ತೀವ್ರ ಕುತೂಹಲ ಕೆರಳಿಸಿದ್ದು, ಹೈಕೋರ್ಟ್ ಆದೇಶದಂತೆ ನಡೆದ ಅಂಚೆ ಮತಗಳ ಮರುಎಣಿಕೆಯಲ್ಲಿ ಕಾಂಗ್ರೆಸ್‌ಗೆ ಆಘಾತ ಎದುರಾಗುವ ಸಾಧ್ಯತೆ ದಟ್ಟವಾಗಿದೆ. ನಿನ್ನೆ (ಮೇ 02) ನಡೆದ ಮರುಎಣಿಕೆಯಲ್ಲಿ ಬಿಜೆಪಿಯ ಡಿ.ಎನ್. ಜೀವರಾಜ್ ಮುನ್ನಡೆ ಸಾಧಿಸಿದ್ದಾರೆ ಎಂಬ ಸುದ್ದಿ ಹರಡುತ್ತಿದ್ದರೂ, ಚುನಾವಣಾಧಿಕಾರಿಗಳು ಈವರೆಗೂ ಅಧಿಕೃತ ಫಲಿತಾಂಶ ಪ್ರಕಟಿಸದಿರುವುದು ತೀವ್ರ ಗೊಂದಲಕ್ಕೆ ಕಾರಣವಾಗಿದೆ.

ಬದಲಾದ ಮತಗಳ ಲೆಕ್ಕಾಚಾರ: 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕ ರಾಜೇಗೌಡ ಅವರು 201 ಮತಗಳ ಅಂತರದಿಂದ ಜಯಗಳಿಸಿದ್ದರು. ಆದರೆ, ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಜೀವರಾಜ್ ಕಾನೂನು ಹೋರಾಟ ನಡೆಸಿದ್ದರು. ಮೂಲಗಳ ಮಾಹಿತಿಯ ಪ್ರಕಾರ, ಮರುಎಣಿಕೆಯಲ್ಲಿ ರಾಜೇಗೌಡರು ಈ ಹಿಂದೆ ಪಡೆದಿದ್ದ 569 ಅಂಚೆ ಮತಗಳ ಪೈಕಿ ಬರೋಬ್ಬರಿ 255 ಮತಗಳು ಅಸಿಂಧುಗೊಂಡಿವೆ. ಇದರಿಂದ ಅವರ ಮತಗಳ ಸಂಖ್ಯೆ 314ಕ್ಕೆ ಕುಸಿದಿದ್ದು, 201 ಮತಗಳಿಂದ ಸೋತಿದ್ದ ಡಿ.ಎನ್. ಜೀವರಾಜ್ ಈಗ 52 ಮತಗಳ ಮುನ್ನಡೆ ಕಾಯ್ದುಕೊಂಡಿದ್ದಾರೆ ಎನ್ನಲಾಗುತ್ತಿದೆ.

ನ್ಯಾಯಾಂಗ ನಿಂದನೆ ಎಚ್ಚರಿಕೆ: ಮರುಎಣಿಕೆ ಪ್ರಕ್ರಿಯೆ ಮುಗಿದಿದ್ದರೂ ಫಲಿತಾಂಶ ಘೋಷಿಸಲು ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ಜೀವರಾಜ್ ಪರ ವಕೀಲೆ ಡಾ. ವಂದನಾ ಪಿ.ಎಲ್. ಅವರು ಚುನಾವಣಾಧಿಕಾರಿಗೆ ಲೀಗಲ್ ನೋಟಿಸ್ ಜಾರಿ ಮಾಡಿದ್ದಾರೆ. ಹೈಕೋರ್ಟ್ ಆದೇಶದಂತೆ ತಕ್ಷಣವೇ ಫಲಿತಾಂಶ ಪ್ರಕಟಿಸಬೇಕು, ಇಲ್ಲದಿದ್ದರೆ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವುದಾಗಿ ನೋಟಿಸ್‌ನಲ್ಲಿ ಎಚ್ಚರಿಸಲಾಗಿದೆ. ಅತ್ತ ಕಾಂಗ್ರೆಸ್ ಮತ್ತು ಇತ್ತ ಬಿಜೆಪಿ ಎರಡೂ ಪಕ್ಷಗಳ ಕಾರ್ಯಕರ್ತರು ತಾವೇ ಗೆದ್ದಿರುವುದಾಗಿ ಪ್ರತಿಪಾದಿಸುತ್ತಿರುವುದರಿಂದ ಕ್ಷೇತ್ರದಲ್ಲಿ ಹೈಡ್ರಾಮಾ ಮುಂದುವರಿದಿದೆ.